ಉಗಿದಳು. ಆದರೆ ಅದ್ಯಾವುದನ್ನೂ ಕೇರುಮಾಡದೇ ಇಬ್ಬರೂ ಸೇರಿ ಗಟ್ಟಿಯಾಗಿ ಹಿಡಿದುಕೊಂಡು ಅನಾಮತ್ತು ಎತ್ತಿಕೊಂಡು ಬಂದು ಎತ್ತಿನ ಗಾಡಿಯಲ್ಲಿ ಹೇರಿಕೊಂಡು ಆಸ್ಪತ್ರೆಗೆ ಹೊತ್ತೊಯ್ದರು. 'ಇದು ಮೆಡಿಕೋ–ಲೀಗಲ್ ಕೇಸು' ಎಂದು ಅಡ್ಮಿಟ್ ಮಾಡಿಕೊಳ್ಳಲು ನಿರಾಕರಿಸಿದರೂ ಸೇರಿದ್ದ ಜನರ ಒತ್ತಾಯಕ್ಕೆ ಮಣಿದು ಸೇರಿಸಿಕೊಂಡರು. ಈಗಾಗಲೇ ಸತ್ತುಹೋಗಿದ್ದಾಳೆ ಎಂದು ಘೋಷಿಸಿ, ವಾಪಸ್ಸು ಕಳಿಸಲು ಡಾಕ್ಟರರು ಯೋಜಿಸಿದರೂ ಇನ್ನೂ ಅತ್ತಿತ್ತ ಆಡುತ್ತಿದ್ದ ಕಣ್ಣುಗಳನ್ನು ಎದುರಿಸಲು ಅವರ ಕೈಲೂ ಆಗಲಿಲ್ಲ. ತನ್ನನ್ನು ಉಳಿಸಿಕೊಳ್ಳಬೇಡಿ ಎಂದು ತೊದಲುತ್ತ ಡಾಕ್ಟರರನ್ನು ಕೈಮುಗಿದು ಬೇಡಿಕೊಳ್ಳುತ್ತಿದ್ದರೆ, ಅದನ್ನು ಅವರು ಉಳಿಸಿಕೊಡುವಂತೆ ಕೋರಿಕೊಳ್ಳುತ್ತಿದ್ದಾಳೆ ಎಂದುಕೊಂಡರು. ಏನೇನೋ ಪ್ರಯೋಗ ಮಾಡಿ, ಎಂತೆಂಥದೊ ಇಂಜೆಕ್ಷನ್ ನೀಡಿ, ಮೂಗಿಗೆ ಕೃತಕ ಉಸಿರಾಟದ ಮಾಸ್ಕ್‌ನ್ನು ಏರಿಸಿದರೂ ಅವ್ವ ಗೆದ್ದೇಬಿಟ್ಟಳು!

ದೂರದ ಗಾಜಿನ ಗೋಡೆಯ ಮರೆಯಿಂದ ನೋಡುತ್ತಿದ್ದವರ ಕಣ್ಣಿಗೆ ಆಕೆ ಸುಖವಾಗಿ ಮಲಗಿಕೊಂಡು ನೆಮ್ಮದಿಯ ನಿಟ್ಟುಸಿರನ್ನು ಬಿಡುತ್ತಿರುವಂತೆ ಭಾಸವಾದರೂ ಆಕೆಯ ಪ್ರಾಣಪಕ್ಷಿ ಅದ್ಯಾವ ಮಾಯದಲ್ಲೋ ಯಾರಿಗೂ ಕಾಣದಂತೆ ಅದೆಲ್ಲಿಗೋ ಹಾರಿಹೋಗಿತ್ತು!

★ ★ ★

ಅಪ್ಪ ಸತ್ತ ಮೇಲೆ ಅವ್ವನ ಹೆಸರಿನ ಬದಲು ತನ್ನದೇ ಹೆಸರಿಗೆ ಮಾಡಿಸಿಕೊಂಡಿದ್ದ ಗದ್ದೆಯಲ್ಲಿ ಮೂರಡಿ–ಆರಡಿಯ ಜಾಗಕ್ಕೇನು ಕೊರತೆಯಿರದಿದ್ದರೂ, ವಿಷ ಕುಡಿದಾಗಿನ ರೌದ್ರಾವತಾರವನ್ನು ಕಂಡು ತನ್ನ ಹೆಂಡತಿ ಈಕರಿದುಬಿಟ್ಟಿರುವುದರಿಂದ ಗದ್ದೆಯಲ್ಲಿ ಮಣ್ಣು ಮಾಡದೇ ಊರ ಮುಂದಿನ ಸ್ಮಶಾನದಲ್ಲಿ ಸುಡಲೆಂದು ಕಾಡಿನಿಂದ ಒಂದು ಗಾಡಿ ಒಣ ಸೌದೆಯನ್ನು ತರಿಸಿದ್ದ. ಅದನ್ನು ಪೇರಿಸಿ ಸರಾಗ ಬೆಂಕಿ ಉರಿಸಲು, ಹತ್ತು ಲೀಟರು ಪೆಟ್ರೋಲನ್ನೂ ಐದು ಲೀಟರು ತುಪ್ಪವನ್ನೂ ತರಿಸಿಟ್ಟಿದ್ದ. ಅಷ್ಟರಲ್ಲಾಗಲೇ ನೆಂಟರಿಷ್ಟರು, ಹೆಣ್ಣುಮಕ್ಕಳೆಲ್ಲ ಅಪ್ಪನ ಸಮಾಧಿಯ ಪಕ್ಕದಲ್ಲೇ ಅವ್ವನನ್ನೂ ಮಣ್ಣು ಮಾಡಬೇಕೆಂದು ಪಟ್ಟುಹಿಡಿದಿದ್ದರು. ಆದರೆ ಗದ್ದೆಬದುಗಳ ಕೆಸರಿನಲ್ಲಿ ಚಟ್ಟವನ್ನು ನಾಲ್ಕು ಜನ ಹೊತ್ತೊಯ್ಯಲಾಗದು ಎಂದು ಸಮಜಾಯಿಷಿ ಹೇಳಿದವನು, ಅವರ ಸಮಾಧಾನಕ್ಕೆ ಇರಲಿ ಎಂದು ಅಲ್ಲಿಯೂ ಒಂದು ಗುಂಡಿ ತೆಗೆಸಿದ್ದ. ಸುಟ್ಟ ಮರುದಿನ, ತನ್ನ ತಮ್ಮ ನಿರಂಜನನನ್ನೂ ಕರೆದುಕೊಂಡು ಹೋಗಿ ಉರಿದು ಬೂದಿಯಾಗಿದ್ದ

